RNU AIR DHARWAD

**AUGUST 9,2024**
**ALL INDIA RADIO- DHARWAD**
**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಮಣ್ಣಿನ ಆರೋಗ್ಯ ರಕ್ಷಣೆಗೆ,** ವಿನೂತನ 'ಭೂ ಸಾರ ಆ್ಯಪ್' ಬಿಡುಗಡೆ – ಎನ್. ಚಲುವರಾಯಸ್ವಾಮಿ.
- **ಕೈಗಾರಿಕರಣದ ವೇಗ ವರ್ಧಿಸಲು** ಭೂಮಿ ಮೀಸಲು; ಉತ್ತರ ಕರ್ನಾಟಕಕ್ಕೆ ಸಿಂಹಪಾಲು – ಎಂ.ಬಿ.ಪಾಟೀಲ, ಮಾಹಿತಿ.
- **ಪ್ಯಾರಿಸ್ ಒಲಿಂಪಿಕ್ಸ್;** ಜಾವೆಲಿನ್ ಥ್ರೋನಲ್ಲಿ ನೀರಜ್ ಚೋಪ್ರಾ, ಮುಡಿಗೆ ಬೆಳ್ಳಿ ಪದಕ.
- **ಶ್ರಾವಣ ಮಾಸದ ಶುಕ್ಲ ಪಕ್ಷದ** ಪಂಚಮಿ ಇಂದು; ನಾಡಿನಾದ್ಯಂತ ನಾಗರ ಪಂಚಮಿ ಸಂಭ್ರಮ.

<><><>

**ಈಗ ವಾರ್ತೆಗಳ ವಿವರ**

<><><>

**ಮಣ್ಣಿನ ಆರೋಗ್ಯ ರಕ್ಷಣೆ ಮತ್ತು ಸಾರ ವರ್ಧನೆ ಮೂಲಕ,** ಕೃಷಿ ಉತ್ಪಾದನೆಯ ಹೆಚ್ಚಳಕ್ಕೆ ನೆರವಾಗಲು, ರಾಜ್ಯ ಕೃಷಿ ಇಲಾಖೆ, ವಿನೂತನ ಭೂ ಸಾರ ಆ್ಯಪ್ ಬಿಡುಗಡೆ ಮಾಡಿದೆ.

ಬೆಂಗಳೂರಿನ ಕೃಷಿ ಆಯುಕ್ತಾಲಯದಲ್ಲಿ, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ, ಈ ಆ್ಯಪ್ ಬಿಡುಗಡೆ ಮಾಡಿದರು.

ಅವೈಜ್ಞಾನಿಕ ಕೃಷಿ, ಅತಿಯಾದ ರಾಸಾಯನಿಕ ಬಳಕೆ, ಮಣ್ಣಿನ ಸವಕಳಿಯಿಂದ ಫಲವತ್ತತೆ ಕಡಿಮೆಯಾಗುತ್ತಿದೆ. ಜೊತೆಗೆ ರೈತರಿಗೆ ತಮ್ಮ ಮಣ್ಣಿನ ಆರೋಗ್ಯದ ಬಗ್ಗೆ ಅರಿವಿನ ಕೊರತೆಯಿದೆ. ಅವೈಜ್ಞಾನಿಕವಾಗಿ ಗೊಬ್ಬರ ಮತ್ತು ಕೀಟನಾಶಕ ಬಳಸಿ ಮಣ್ಣಿನ ಸತ್ವ ಹಾಳು ಮಾಡುವುದರ ಜೊತೆಗೆ ನಷ್ಟವನ್ನು ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರೈತರಿಗೆ ಭೂ ಸಾರ ಆ್ಯಪ್ ಪ್ರಯೋಜನಕಾರಿಯಾಗಲಿದೆ ಎಂದು, ಸಚಿವರು ಹೇಳಿದರು.

<><><>

**ಉತ್ತರ ಕರ್ನಾಟಕ ಭಾಗದ ಸಕ್ಕರೆ ಕಾರ್ಖಾನೆಗಳಲ್ಲಿ,** ಬರುವ ನವೆಂಬರ್ 15 ರಿಂದ ಕಬ್ಬು ನುರಿಸುವಿಕೆಯನ್ನು ಆರಂಭಿಸಲು, 'ಸಿಸ್ಮಾ' – ಸೌಥ್ ಇಂಡಿಯನ್ ಶುಗರ್ ಮಿಲ್ಸ್ ಅಸೋಸಿಯೇ ನ್ ಸಭೆ, ತೀರ್ಮಾನಿಸಿದೆ.

ವಿಕಾಸಸೌಧದಲ್ಲಿ ಸಕ್ಕರೆ ಖಾತೆ ಸಚಿವ ಶಿವಾನಂದ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಿತು.

ಆಯಾ ವ ರ್ದ ಸಕ್ಕರೆ ಇಳುವರಿ ಆಧರಿಸಿ, ಕಬ್ಬಿಗೆ ಎಫ್.ಆರ್.ಪಿ – ನ್ಯಾಯಯುತ ಬೆಲೆ ನಿಗದಿಪಡಿಸಬೇಕು ಎಂದು ಸಿಸ್ಮಾ ಪದಾಧಿಕಾರಿಗಳು ಸಚಿವರಿಗೆ ಮನವಿ ಮಾಡಿದರು.

ಬೆಲೆ ನಿಗದಿ ಬೇಡಿಕೆಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಸಚಿವರು ಭರವಸೆ ನೀಡಿದರು.

<><><>

**ರಾಜ್ಯದಲ್ಲಿ ಕೈಗಾರಿಕರಣದ ವೇಗ ವರ್ಧಿಸಲು,** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನಾಲ್ಕು ಸಾವಿರದ ನೂರು ಎಕರೆ ಭೂಮಿಯನ್ನು ಹಂಚಿಕೆ ಮಾಡಲಿದ್ದು, ಉತ್ತರ ಕರ್ನಾಟಕ ಭಾಗಕ್ಕೆ ಸಿಂಹಪಾಲು ಲಭಿಸಿದೆ ಎಂದು, ಬೃಹತ್ ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ವಿಜಯಪುರ ಜಿಲ್ಲೆಗೆ 857 ಎಕರೆ 92 ಗುಂಟೆ ಸೇರಿದಂತೆ, ಉತ್ತರ ಕರ್ನಾಟಕಕ್ಕೆ 2 ಸಾವಿರದ 45 ಎಕರೆ 40 ಗುಂಟೆ ಭೂಮಿ ಲಭ್ಯವಾಗಲಿದೆ ಎಂದು, ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

<><><>

**ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿ** ಪವನ ಕಲ್ಯಾಣ್, ಉನ್ನತ ಅರಣ್ಯಾಧಿಕಾರಿಗಳೊಂದಿಗೆ ಬೆಂಗಳೂರಿಗೆ ಆಗಮಿಸಿ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಅವರೊಂದಿಗೆ ಚರ್ಚಿಸಿದರು.

ಕರ್ನಾಟಕದಲ್ಲಿ ಕಾಡಾನೆಗಳ ಹಾವಳಿ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳು, ರೈಲ್ವೆ ಬ್ಯಾರಿಕೇಡ್ ಅಳವಡಿಕೆಯ ಯಶಸ್ಸು, ಕಾಡಾನೆಗಳ ಸೆರೆ ಕಾರ್ಯಾಚರಣೆ, ಆನೆ ಪಳಗಿಸುವುದು ಮತ್ತು ಮಾವುತರ ತರಬೇತಿ ಕುರಿತಂತೆ ಚರ್ಚೆ ನಡೆಯಿತು ಎಂದು, ಸಚಿವ ಖಂಡ್ರೆ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ.

<><><>

**ಮಕ್ಕಳು ಹಾಗೂ ತಾಯಂದಿರಲ್ಲಿನ** ಅಪೌಷ್ಟಿಕತೆ ನಿವಾರಣಾ ಸಲಹಾ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ವೇಣುಗೋಪಾಲ ಗೌಡ ಅವರ ನಿರ್ದೇಶನದಂತೆ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ, 3 ಸಾವಿರ ಅಂಗನವಾಡಿಗಳ ಪೈಕಿ, 150 ಕೇಂದ್ರಗಳನ್ನು ಕಳೆದ ಒಂದು ವ ರ್ದ ಅವಧಿಯಲ್ಲಿ ಪರಿಶೀಲಿಸಿ, ಆ ಪೈಕಿ 60 ಕೇಂದ್ರಗಳ ವರದಿಯನ್ನು ಸಮಿತಿಗೆ ಕಳುಹಿಸಲಾಗಿದೆ ಎಂದು, ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ್ ಹೊಸಮನೆ, ಆಕಾಶವಾಣಿಗೆ ತಿಳಿಸಿದ್ದಾರೆ.

<><><>

**ನ್ಯಾಯಾಧೀಶ ರಾಜೇಶ್ ಹೊಸಮನೆ ಧ್ವನಿ 39 ಸೆಕೆಂದುಗಳು**

<><><>

**ಚಿತ್ರದುರ್ಗ ಜಿಲ್ಲೆಯ ಆಯ್ದ ಅಂಗನವಾಡಿ** ಕೇಂದ್ರಗಳಿಗೆ ತಾವು ಭೇಟಿ ನೀಡಿ, ಅವುಗಳ ಸ್ಥಿತಿ–ಗತಿ ಅವಲೋಕಿಸಿದ್ದಾಗಿ, ಪ್ರಧಾನ ಜಿಲ್ಲಾ ನ್ಯಾಯಧೀಶ ವಾಸುದೇವ ರೋಣ ತಿಳಿಸಿದ್ದಾರೆ.

ಆಪೈಕಿ ಅನೇಕ ಅಂಗನವಾಡಿ ಕೇಂದ್ರಗಳಲ್ಲಿ ಮೂಲ ಸೌಕರ್ಯದ ಕೊರತೆ ಇರುವುದು ಕಂಡುಬಂದಿದೆ; ಈ ಕುರಿತು ಉಚ್ಚ ನ್ಯಾಯಾಲಯಕ್ಕೆ ವರದಿ ಸಲ್ಲಿಸುವುದಾಗಿ, ಅವರು ಹೇಳಿದರು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಶ್ರಾವಣ ಮಾಸದ ಶುಕ್ಲ ಪಕ್ಷದ** ಪಂಚಮಿ ಇಂದು; ನಾಗರ ಪಂಚಮಿ ಹಬ್ಬವನ್ನು, ನಾಡಿನಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ.

ನಾಗರ ಪಂಚಮಿ ಹಬ್ಬದ ಹಿನ್ನೆಲೆ, ಮಣ್ಣಿನಿಂದ ತಯಾರಿಸಿದ ನಾಗ ದೇವರ ಮೂರ್ತಿಯನ್ನು, ಮನೆ ಮನೆಯಲ್ಲಿ ಪ್ರತಿಷ್ಠಾಪಿಸಿ ಪೂಜಿಸಲಾಗುತ್ತದೆ.

ಈ ದಿನದಂದು ದೇಶಾದ್ಯಂತ ಮಹಿಳೆಯರು, ನಾಗಬನಗಳಲ್ಲಿ ಕಲ್ಲಿನ ನಾಗರ ಮೂರ್ತಿಗಳಿಗೆ, ಹಾಲನ್ನು ಸಮರ್ಪಿಸಿ, ನಾಗ ದೇವತೆಯನ್ನು ವಿಶೇಷವಾಗಿ ಪೂಜಿಸುತ್ತಾರೆ. ನಾಡಿನ ವಿವಿಧೆಡೆಯ ನಾಗ ಬನಗಳನ್ನು ಅಲಂಕರಿಸಲಾಗಿದೆ.

ಧಾರವಾಡ ಪೇಟೆ ಸೇರಿದಂತೆ, ಮಾರುಕಟ್ಟೆಗಳಲ್ಲಿ ಹಬ್ಬದ ಖರೀದಿಯ ಭರಾಟೆ ನಿನ್ನೆ ಜೋರಾಗಿತ್ತು.

ಅಳ್ಳಿಟ್ಟು, ಹತ್ತಾರು ನಮೂನೆ ಉಂಡಿ ಹಾಗೂ ಹೋಳಿಗೆ ಇಂದಿನ ನೈವೇದ್ಯ ಮತ್ತು ಹಬ್ಬದೂಟಕ್ಕೆ ಸಿದ್ಧಗೊಳ್ಳುತ್ತಿವೆ. ಜೋಕಾಲಿಗಳು ಸಹ ಹೆಂಗಳೆಯರು ಜೀಕಲು ಅಲಂಕೃತಗೊಂಡಿವೆ. ಒಣ ಖೊಬ್ಬರಿ ಬುಗುರಿ ಮಕ್ಕಳಿಗೆ ವಿಶೇಷ ಆಕರ್ಷಣೆಯಾಗಲಿದೆ.

<><><>

**'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ'**, ಮಹಾತ್ಮ ಗಾಂಧೀಜಿ ಅವರು, 1942ರ ಆಗಸ್ಟ್ 8 ರಂದು, ಕ್ವಿಟ್ ಇಂಡಿಯಾ ಚಳವಳಿಗೆ, ಮುಂಬೈಯಲ್ಲಿ ನಡೆದ, ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಕರೆ ನೀಡಿದರು.

ಈ ಐತಿಹಾಸಿಕ ಘಟನೆಗೆ 82 ವರ್ಷಗಳಾದವು. ತನ್ಮೂಲಕ ಆ ಚಳವಳಿಯಲ್ಲಿ ಭಾಗವಹಿಸಿದವರ ಶೌರ್ಯ ಮತ್ತು ತ್ಯಾಗವನ್ನು ಗೌರವಿಸುವ ಗುರಿ ಹೊಂದಿದೆ.

ಪ್ರಜಾಪ್ರಭುತ್ವ ಮತ್ತು ಸಮಾನತೆಯ ತತ್ವಗಳನ್ನು ಎತ್ತಿಹಿಡಿಯಲು, ಭಾರತದ ಬದ್ಧತೆಯನ್ನು ಈ ಆಚರಣೆ ಪುನರುಚ್ಚರಿಸಿತು. ರಾಜ್ಯಾದ್ಯಂತ, ವಿಶೇಷ ಉಪನ್ಯಾಸ ಕಾರ್ಯಕ್ರಮ, ಪ್ರದರ್ಶಿನಿಗಳು ಆಯೋಜಿತವಾಗಿದ್ದ ವರದಿಗಳು ಬಂದಿವೆ.

<><><>

**ದಾವಣಗೆರೆಯ** ಗಾಂಧಿ ಮಂದಿರದಲ್ಲಿ, 'ಕ್ವಿಟ್ ಇಂಡಿಯಾ ಚಳವಳಿ ಸಂಸ್ಮರಣೆ' ಹಿನ್ನೆಲೆ, ವ್ಯಸನ ಮುಕ್ತಿ ಹಾಗೂ ಸ್ವಾತಂತ್ರ್ಯದ 77ನೇ ವರ್ಷಾಚರಣೆ ವಿಶೇಷ ಕಾರ್ಯಕ್ರಮ ಜರುಗಿತು.

<><><>

**ಬೆಳಗಾವಿಯಲ್ಲಿ ಇಂದು ಬೆಳಗ್ಗೆ** 10 ಗಂಟೆಗೆ, ಸ್ವಾತಂತ್ರ್ಯ ಸೇನಾನಿಗಳ ಮತ್ತು ಉತ್ತರಾಧಿಕಾರಿಗಳ ಸಂಘದ ಭವನದಲ್ಲಿ, ಕ್ವಿಟ್ ಇಂಡಿಯಾ ಚಳವಳಿ ಸ್ಮರಣೆಯ ವಿಶೇಷ ಕಾರ್ಯಕ್ರಮ ಆಯೋಜಿತವಾಗಿದೆ. ಜಿಲ್ಲಾಧಿಕಾರಿ ಮೊಹಮ್ಮದ ಮೋಹಸಿನ್ ಅವರು, ಶತಾಯುಷಿ ಸ್ವಾತಂತ್ರ್ಯ ಯೋಧ ರಾಜೇಂದ್ರ ಕಲಘಟಗಿ ಅವರ ಮನೆಗೆ ತೆರಳಿ, ಜಿಲ್ಲಾಡಳಿತದ ಪರವಾಗಿ ಗೌರವಿಸಲಿದ್ದಾರೆ.

<><><>

**ದೇಶಾದ್ಯಂತ ಇಂದಿನಿಂದ, 15 ನೇ ತಾರೀಖಿನ ವರೆಗೆ,** 'ಹರ್ ಘರ್ ತಿರಂಗಾ ಅಭಿಯಾನ'ವನ್ನು ಕೇಂದ್ರ ಸರ್ಕಾರ ಆಯೋಜಿಸಿದೆ.

ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ಗೌರವದಿಂದ ರಾಷ್ಟ್ರ ಧ್ವಜಾರೋಹಣ ಮಾಡೋಣ ಎಂದು, ದಿಲ್ಲಿಯಲ್ಲಿ ಕೋರಿದರು.

ರಾಷ್ಟ್ರಧ್ವಜ ಏಕತೆಯ ಸಂಕೇತವಾಗಿದೆ. 2047ರ ವಿಕಸಿತ ಭಾರತ ಸಂಕಲ್ಪವನ್ನು ಮತ್ತೊಮ್ಮೆ ದೃಢಪಡಿಸಲು ಅಭಿಯಾನ ನೆರವಾಗಲಿದೆ ಎಂದು ಹೇಳಿದರು.

<><><>

**ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ, ಭಾರತದ ನೀರಜ್ ಚೋಪ್ರಾ,** ಪುರುಷರ ಜಾವೆಲಿನ್ ಥ್ರೋನಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.

ಒಟ್ಟು 89 ದಶಾಂಶ 4-5 ಮೀಟರ್ಸ್ ದೂರ ಜಾವೆಲಿನ್ ಥ್ರೋ ಮಾಡಿದ ನೀರಜ್, ಒಲಿಂಪಿಕ್ಸ್ ಕೂಟದಲ್ಲಿ ಎರಡು ಪದಕಗಳನ್ನು ಗೆದ್ದ, ಭಾರತದ ಮೊದಲ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

<><><>

**ಪ್ಯಾರಿಸ್ ಒಲಿಂಪಿಕ್ಸ್‌ನ,** ಪುರುಷರ ಹಾಕಿ ಪಂದ್ಯದಲ್ಲಿ, ಭಾರತ ತಂಡ ಕಂಚಿನ ಪದಕ ಗೆದ್ದಿದೆ.

ಸ್ಪೇನ್ ವಿರುದ್ಧ ಸೆಣಸಾಡಿ 2-1 ಗೋಲುಗಳ ಅಂತರದಲ್ಲಿ ಭಾರತ ತಂಡ ಕಂಚಿನ ಪದಕವನ್ನು ತನ್ನದಾಗಿಸಿಕೊಂಡಿತು.

<><><>

**ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ** ಮಹಿಳೆಯರ 50 ಕಿಲೋ ವಿಭಾಗದ ಕುಸ್ತಿ ಅಂತಿಮ ಪಂದ್ಯದಲ್ಲಿ, ಅನರ್ಹಗೊಂಡ ವಿನೇಶ್ ಪೋಗಟ್ ನಿವೃತ್ತಿ ಘೋಷಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ವಿಷಯ ಪ್ರಕಟಿಸಿದ್ದಾರೆ.

<><><>

**ಧಾರವಾಡದ ಗಂಗೂಬಾಯಿ ಸಂಗೀತ ವಿದ್ಯಾಲಯ ಮತ್ತು ಭಾರತೀಯ ಸಂಗೀತ** ವಿದ್ಯಾಲಯ ನೀಡುವ, ಗಂಗೂಬಾಯಿ ಹಾನಗಲ್ ರಾಷ್ಟ್ರೀಯ ಪ್ರಶಸ್ತಿಗೆ ಬಾನ್ಸುರಿ ವಾದಕ ಮುಂಬೈಯ, ರಾಕೇಶ ಚೌರಸಿಯಾ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ 65 ಸಾವಿರ ರೂಪಾಯಿ ಮತ್ತು ಫಲಕವನ್ನು ಒಳಗೊಂಡಿದೆ.

ನಾಡಿದ್ದು ಧಾರವಾಡದ ಸೃಜನಾ ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ.

<><><>

**ನಟಿ ಉಮಾಶ್ರೀ, ನಾಟಕಕಾರರಾದ** ಎಚ್.ಎಸ್.ಶಿವಪ್ರಕಾಶ ಹಾಗೂ ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ ಅವರು, ರಾಜ್ಯ ನಾಟಕ ಅಕಾದೆಮಿಯ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅಕಾದೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಮೂರು ವಾರ್ಷಿಕಗಳ, 93 ಜನ ಪ್ರಶಸ್ತಿ ಪುರಸ್ಕೃತರ ಪಟ್ಟಿ ಬಿಡುಗಡೆ ಮಾಡಿದರು. 15 ಜನರಿಗೆ ದತ್ತಿ ನಿಧಿ ಪ್ರಶಸ್ತಿ ಪ್ರಕಟಿಸಲಾಗಿದೆ.

ಧಾರವಾಡದ ಹಿರಿಯ ರಂಗಕರ್ಮಿ ರಜನಿ ಗರುಡ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಅಕಾದೆಮಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

<><><>

**ರಾಜ್ಯಸಭಾ ಸಂಸದ, ಎಚ್.ಡಿ.ದೇವೇಗೌಡ** ಅವರು, ಕೇಂದ್ರ ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ, ಶಿರಾಡಿ ಘಾಟ್ ಭೂ ಕುಸಿತ ದುರಂತದ ಕುರಿತು ಚರ್ಚೆ ನಡೆಸಿದರು.

ಕರ್ನಾಟಕ ಸರ್ಕಾರ ಸಣ್ಣ ಪ್ರಮಾಣದ ಅರಣ್ಯ ಭೂಮಿಯನ್ನು ನೀಡಿದಲ್ಲಿ, ಟನಲಿಂಗ್ ತಂತ್ರಜ್ಞಾನ ಸೇರಿದಂತೆ, ಕೇಂದ್ರ ಸರ್ಕಾರ ಹೆದ್ದಾರಿ ಅಭಿವೃದ್ಧಿಗೆ ಹೂಡಿಕೆ ಮಾಡಲಿದೆ ಎಂದು, ಗಡ್ಕರಿ ಭರವಸೆ ನೀಡಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

- **ಮಣ್ಣಿನ ಆರೋಗ್ಯ ರಕ್ಷಣೆಗೆ,** ವಿನೂತನ 'ಭೂ ಸಾರ ಆ್ಯಪ್' ಬಿಡುಗಡೆ – ಎನ್. ಚಲುವರಾಯಸ್ವಾಮಿ.
- **ಕೈಗಾರಿಕರಣದ ವೇಗ ವರ್ಧಿಸಲು** ಭೂಮಿ ಮೀಸಲು; ಉತ್ತರ ಕರ್ನಾಟಕಕ್ಕೆ ಸಿಂಹಪಾಲು – ಎಂ.ಬಿ.ಪಾಟೀಲ, ಮಾಹಿತಿ.
- **ಪ್ಯಾರಿಸ್ ಒಲಿಂಪಿಕ್ಸ್;** ಜಾವೆಲಿನ್ ಥ್ರೋನಲ್ಲಿ ನೀರಜ್ ಚೋಪ್ರಾ, ಮುಡಿಗೆ ಬೆಳ್ಳಿ ಪದಕ.
- **ಶ್ರಾವಣ ಮಾಸದ ಶುಕ್ಲ ಪಕ್ಷದ** ಪಂಚಮಿ ಇಂದು; ನಾಡಿನಾದ್ಯಂತ ನಾಗರ ಪಂಚಮಿ ಸಂಭ್ರಮ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 9 ಗಂಟೆ 5 ನಿಮಿಷಕ್ಕೆ.**

<><><>